

## ಹಕ್ಕಿಗಳಿಗೊಂದು ಪುಟ್ಟ ಗೂಡು

ನಗರೀಕರಣದ ಭರದಲ್ಲಿ ಇಂದು ಮರಗಳು ಕೊಡಲಿ ಏಟಿಗೆ ಬಲಿಯಾಗಿ ಹಕ್ಕಿಗಳಿಗೆ ಆವಾಸಗಳ ಸಮಸ್ಯೆ ಎದುರಾಗಿದೆ. ಇಂಥ ಸಂದರ್ಭದಲ್ಲಿ ಪಕ್ಷಿಪ್ರೇಮಿಗಳು ತಮ್ಮ ಅಂಗಡಿಗಳ ಮುಂದೆ ಕಾಟನ್‌ಬಾಕ್ಸ್‌ಗಳಿಂದ ರಚಿಸಿದ ಗೂಡುಗಳನ್ನು ಅಳವಡಿಸುವ ಮೂಲಕ ಹಕ್ಕಿಗಳಿಗೆ ಆಸರೆ ನೀಡಿರುವುದು ಆದರ್ಶನೀಯ. ಚಿತ್ರದಲ್ಲಿನ ಗೂಡುಗಳು ನೋಡಲು ಸಿಕ್ಕಿದ್ದು ಬೆಳ್ತಂಗಡಿ ತಾಲ್ಲೂಕಿನ ಉಜಿರೆಯಲ್ಲಿ. ಕಾರ್ಡ್‌ಬೋರ್ಡ್‌ಗಳಿಗೆ ಸಣ್ಣ ರಂಧ್ರ ಕೊರೆದು ಹಕ್ಕಿಗಳು ಗೂಡು ಕಟ್ಟಲು ಅನುಕೂಲವಾಗುವ ವ್ಯವಸ್ಥೆಯನ್ನು ಪಕ್ಷಿಪ್ರೇಮಿಗಳು ಮಾಡಿದ್ದಾರೆ. ಗೂಡಿನ ಬಳಿ ಗುಬ್ಬಚ್ಚಿಗಳು ಓಡಾಡುತ್ತಾ ತಮ್ಮ ಇರುವನ್ನು ವ್ಯಕ್ತಪಡಿಸಿದವು. ಪರಿಸರದಲ್ಲಿ ಮಾನವನ ಹಸ್ತಕ್ಷೇಪ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಈ ಕೆಲಸ ಶ್ಲಾಘನೀಯ ಆಗಿದೆ.

–ಅರುಣ್ ಕಿಲ್ಲೂರು

## ಕಂಗೊಳಿಸುವ ಕ್ಯಾಂಡಲ್ ಬುಷ್



ಉದ್ಯೋಗ ನಿಮಿತ್ತ ನಿತ್ಯ ಪ್ರಯಾಣಿಕಳಾದ ನಾನು ಬಸ್ಸಿನ ಕಿಟಕಿಯಾಚೆ ಗಮನಿಸುತ್ತಿರುವಾಗ ರಸ್ತೆಯ ಇಕ್ಕೆಲಗಳಲ್ಲಿ ಹಸಿರು ಎಲೆಗಳ ಮಧ್ಯೆ ಹೊಳೆಯುವ ಹಳದಿ ಬಣ್ಣದ ಆಕರ್ಷಕ ಹೂಗುಚ್ಛವೊಂದು ನನ್ನ ಕಣ್ಣನ ಸೆಳೆಯಿತು. ಈ ಗಿಡದ ಹೆಸರು ಆನೆ ತಗಚೆ. ಸೆನ್ನ ಅಲಾಟ (Senna alata) ಎಂಬ ಸಸ್ಯಶಾಸ್ತ್ರೀಯ ಹೆಸರನ್ನು ಹೊಂದಿರುವ ಈ ಗಿಡ ಫ್ಯಾಬೇಸಿ ಕುಟುಂಬಕ್ಕೆ ಸೇರುತ್ತದೆ. ಕ್ಯಾಂಡಲ್ ಕ್ಯಾಶಿಯ, ಕ್ಯಾಂಡಲ್ ಬುಷ್, ಕ್ಯಾಂಡಲ್ ಸ್ಟಿಕ್ಸ್, ರಿಂಗ್ ವಾರ್ಮ್ ಕ್ಯಾಶಿಯ ಇತ್ಯಾದಿ ಸಾಮಾನ್ಯ ಹೆಸರುಗಳು ಈ ಸಸ್ಯಕ್ಕಿವೆ. ಪ್ರಕಾಶಮಾನವಾದ ಹಳದಿ ಹೂ ಗೊಂಚಲುಗಳಿಂದ ಮುಂಬತ್ತಿಯಂತೆ ಗೋಚರಿಸುವ ಕಾರಣದಿಂದಲೇ ಕ್ಯಾಂಡಲ್ ಬುಷ್ ಅಥವಾ ಕ್ಯಾಂಡಲ್ ಸ್ಟಿಕ್ಸ್ ಎಂಬ ಹೆಸರು ಈ ಗಿಡಕ್ಕೆ ಬಂದಿರಬಹುದು. ಫ್ಯಾಬೇಸಿ ಕುಟುಂಬದ ಹಲವು ಪ್ರಭೇದಗಳು ಮಣ್ಣಿನ ಬ್ಯಾಕ್ಟೀರಿಯಾದೊಂದಿಗೆ ಸಹಜೀವನ ಸಂಬಂಧವನ್ನು ಹೊಂದಿದ್ದರೂ ಈ ಪ್ರಭೇದವು ಅಂತಹ ಸಂಬಂಧವನ್ನು ಹೊಂದಿಲ್ಲ ಹಾಗೂ ಸಾರಜನಕವನ್ನು ಸ್ಥಿರೀಕರಿಸುವುದಿಲ್ಲ ಎಂದು ಹೇಳಲಾಗುತ್ತದೆ.

ಸುಮಾರು 2 ಮೀಟರ್‌ಗಳಷ್ಟು ಎತ್ತರ ಬೆಳೆಯುವ ಈ ಪೊದೆಯನ್ನು ಸಾಂಪ್ರದಾಯಿಕ ಔಷಧವಾಗಿ ಬಳಸಲಾಗುತ್ತದೆ. ವಿಶೇಷವಾಗಿ ಅದರ ವಿರೇಚಕ ಪರಿಣಾಮ ಮತ್ತು ರಿಂಗ್ ವಾರ್ಮ್ ಅನ್ನು, ಹುಳುಕಡ್ಡಿ ಸೇರಿದಂತೆ ಚರ್ಮಕ್ಕೆ ಸಂಬಂಧಿಸಿದ ಹಲವಾರು ಸೋಂಕುಗಳ ಪರಿಣಾಮಕಾರಿ ಚಿಕಿತ್ಸೆಗಾಗಿ ಉಪಯೋಗಿಸಲಾಗುತ್ತದೆ. ಫಿಲಿಪ್ಪೀನ್ಸ್, ಥಾಯ್ಲೆಂಡ್ ಮತ್ತು ಇಂಡೋನೇಷ್ಯಾದಲ್ಲಿ ಈ ಪೊದೆ ಸಸ್ಯವನ್ನು ವ್ಯಾಪಕವಾಗಿ ಔಷಧೀಯ ಉದ್ದೇಶಗಳಿಗಾಗಿ ಬೆಳೆಸಲಾಗುತ್ತದೆ. ಅಂದಹಾಗೆ ಈ ಸಸ್ಯ ಕಂಡು ಬಂದಿದ್ದು ತೀರ್ಥಹಳ್ಳಿ ತಾಲ್ಲೂಕಿನ ತೂದೂರಿನ ಬಳಿ.

–ಶ್ರೀಸೀತೆ ಕುಂದೂರು, ಶಿವಮೊಗ್ಗ



## ಟೌನ್‌ಹಾಲ್ ಮುಂದೆ ನಿಂತ ಹೆಲಿಕಾಪ್ಟರ್!

ಕಲ್ಪತರು ನಾಡು, ವಿದ್ಯಾನಗರಿ, ಸ್ಮಾರ್ಟ್ ಸಿಟಿ ಎಂಬೆಲ್ಲಾ ಹೆಸರಿರುವ ತುಮಕೂರು ನಗರದಲ್ಲಿ ಇದ್ದಕ್ಕಿದ್ದಂತೆ ಹೆಲಿಕಾಪ್ಟರ್ ಬಂದು ನಿಂತಿದೆ! ಹೌದು, ಬೆಂಗಳೂರು ಹೊನ್ನಾವರ ಮುಖ್ಯ ರಸ್ತೆ (ಬಿ. ಹೆಚ್. ರೋಡ್) ಮಾರ್ಗವಾಗಿ ಹಾದು ಹೋಗುವಾಗ ನಗರದ ಹೃದಯಭಾಗದಲ್ಲಿ ಟೌನ್‌ಹಾಲ್ ಇದ್ದು, ಇದರ ಎದುರಗಡೆಯ ಸರ್ಕಲ್‌ನಲ್ಲಿ ದೊಡ್ಡ ಗಾತ್ರದ ಹೆಲಿಕಾಪ್ಟರ್ ಅನ್ನು ತಂದು ನಿಲ್ಲಿಸಲಾಗಿದೆ. ಇದು ಈ ಭಾಗದ ಜನರನ್ನು ಸೆಳೆಯುತ್ತಿದೆ.

ಅಷ್ಟಕ್ಕೂ ಇದು ಸಿಮೆಂಟ್, ಮರದ ಸಲಕರಣೆಗಳಿಂದ ಮಾಡಿದ ಪ್ರತಿಕೃತಿಯಲ್ಲ. ನೈಜ ಹೆಲಿಕಾಪ್ಟರ್. ಹೆಚ್‌ಎಎಲ್ ನಿರ್ಮಿತ ಈ ಹೆಲಿಕಾಪ್ಟರ್ ಅನ್ನು ಹಗುರ ಬಳಕೆಗೆ ಬಳಸಲಾಗುತ್ತಿತ್ತು. ಈ ಬಗ್ಗೆ ಹಳದಿ ಬಣ್ಣದಿಂದ ಬರೆಯಲಾಗಿದೆ. ಹೆಲಿಕಾಪ್ಟರ್ ಚಾಲಕನ ಸೀಟಿನ ಹಿಂಭಾಗದಲ್ಲಿ ಮೇಕ್ ಇನ್ ಇಂಡಿಯಾ ಎಂಬ ಬರಹವೂ ಇದೆ. ಈಚೆಗೆ ತುಮಕೂರು ಸಹ ಲವಲವಿಕೆಯನ್ನು ಪಡೆಯುತ್ತಿದೆ. ಹಬ್ಬ ಹರಿದಿನಗಳನ್ನು ಇಲ್ಲಿ ಜೋರಾಗಿಯೇ ಆಚರಿಸಲಾಗುತ್ತದೆ. ನಗರವನ್ನು ಅತ್ಯಾಕರ್ಷಕ ದೀಪಾಲಂಕಾರದಿಂದ ಕಂಗೊಳಿಸುವಂತೆ ಮಾಡಲಾಗುತ್ತಿದೆ.

ಅಂದಹಾಗೆ ಹೆಲಿಕಾಪ್ಟರ್ ಒಂದನ್ನು ಕಳೆದ ದಸರಾ ಸಂಭ್ರಮದ ವೇಳೆ ತುಮಕೂರಿಗೆ ಕರೆಸಿಕೊಳ್ಳಲಾಗಿತ್ತು. ತುಮಕೂರು ಹಾಗೂ ಸುತ್ತಮುತ್ತ ಇರುವ ಸಿದ್ಧಗಂಗೆ, ಶಿವಗಂಗೆ, ದೇವರಾಯನ ದುರ್ಗ, ಗೂಳೂರು ಮುಂತಾದ ಪ್ರವಾಸಿ ತಾಣಗಳಲ್ಲಿ ಆ ಹೆಲಿಕಾಪ್ಟರ್ ಅನ್ನು ಒಂದು ರೌಂಡ್ ಸುತ್ತಾಡಿಸುವ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಇದರ ನೆನಪಿಗಾಗಿ ತುಮಕೂರು ಮಹಾನಗರ ಪಾಲಿಕೆ ಮತ್ತು ಸಂಬಂಧ ಪಟ್ಟ ಇಲಾಖೆಯ ಮುಖ್ಯಸ್ಥರು ಪ್ರತಿಕೃತಿ ನಿರ್ಮಿಸುವ ಬದಲು ನಿಜವಾದ ಹೆಲಿಕಾಪ್ಟರ್ ಅನ್ನೇ ಇಲ್ಲಿ ಸ್ಥಾಪಿಸಿದ್ದಾರೆ. ಇದು ಉಪಯೋಗಿಸಲು ಸಾಧ್ಯವಿಲ್ಲದ ಹಳೆಯ ಹೆಲಿಕಾಪ್ಟರ್ ಆಗಿದೆ. ಇದನ್ನು ಯಾರಾದರು ನೋಡಿದರೆ, ಇದ್ಯಾಕೆ ಹೆಲಿಕಾಪ್ಟರ್ ಇಲ್ಲಿ ನಿಂತಿದೆ ಎಂದು ತಲೆಗೆ ಹುಳಬಿಟ್ಟುಕೊಳ್ಳದೇ ಇರುವುದಿಲ್ಲ.

–ಆರ್. ವೀರೇಶ್ ಕುಮಾರ್, ಬೆಂಗಳೂರು

